**ದಿಃ 24-02-2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು: ಎದ್ರುದಾರ 4(ಎ) ರಿಂದ (ಎಫ್) ರವರ ಪರ ಶ್ರೀ ಸಿ ಆರ್ ಪಿ ವಕೀಲರಿಂದ

ಸ್ವಾಧೀನಕ್ಕೆ ಒಳಪಟ್ಟ ಜಾಗ ಮೂಲತಃ ನನ್ನ ತಂದೆಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಜಾಗವಾಗಿರುತ್ತದೆ. ನಾವು ನನ್ನ ತಂದೆ 3 ಜನ ಮಕ್ಕಳು ಅಂದರೆ ನನ್ನ ಅಕ್ಕ ದುರ್ಗಮ್ಮ, ಮತ್ತೊಬ್ಬ ಅಕ್ಕ ಮರ್ಲಿ ಮತ್ತು ನಾನು. ನಿಆರ್-5 ರ ಪ್ರಕಾರ ನನ್ನ ಸಹೋದರಿಯರಿ ದುರ್ಗಮ್ಮ ಅವರ ಮಕ್ಕಳು ಮತ್ತು ಮರ್ಲಿ ಇವರು ಸದ್ರಿ ಆಸ್ತಿಯನ್ನು ನನಗೆ ಬಿಟ್ಟು ಕೊಟ್ಟಿರುತ್ತಾರೆ. ಭೂ ನ್ಯಾಯ ಮಂಡಳಿಯಿಂದ ನನ್ನ ತಂದೆಗೆ ಮಂಜೂರಾದ ಆಸ್ತಿಯಲ್ಲಿ ಸರ್ವೇ ನಂಬ್ರ 12/4 ಎ ರಲ್ಲಿ 0.18 ಎಕ್ರೆ ಮತ್ತು ಸರ್ವೇ ನಂಬ್ರ 10/2 ರಲ್ಲಿ 0.05 ಎಕ್ರೆ ಜಾಗ ಕೊಂಕಣ್ ರೈಲ್ವೆಗೆ 1993 ಕ್ಕೆ ಸ್ವಾಧೀನಕ್ಕೆ ಒಳಪಟ್ಟಿದೆ. ಈಗ ಈಗಿನ ಸರ್ವೆ ನಂಬ್ರ 12/4 ಎ 3 ಎ 1 ರಲ್ಲಿ 1.03 ಎಕ್ರೆ ಜಾಗದಲ್ಲಿ 0.23 ಎಕ್ರೆ ಜಾಗ ಹೆದ್ದಾರಿಗೆ ಸ್ವಾಧೀನಕ್ಕೆ ಒಳಪಟ್ಟಿದೆ. ನಿಆರ್-11 ದಾಖಲಾತಿಯನ್ನೇ ನಾನು ನಿಆರ್-12 ಅಂತ ಪುನಃ ದಾಖಲು ಮಾಡಿದ್ದೇನೆ ಎಂದರೆ ಸರಿ.

ಪಾಟೀ ಸವಾಲು: ಎದ್ರುದಾರ 2(ಎ) ರಿಂದ (ಜಿ) ರವರ ಪರ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ